ಸಿ.ಸಿ. ನಂ.253/2021
ಪಿಡಬ್ಲ್ಯೂ-2

ದಿನಾಂಕಃ 07-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ವಿಟಿಎಸ್ ವಕೀಲರಿಂದ:**

ದೂರುದಾರ ನನ್ನ ಕ್ಲಾಸಮೇಟ್ ಇರುವುದರಿಂದ ಬಹಳ ದಿನಗಳಿಂದ ಪರಿಚಯ. ಪಿರ್ಯಾದುದಾರ ಸಾಕ್ಷಿಯನ್ನು ಹೀಗೆ ಹೇಳಬೇಕೆಂದು ನನಗೆ ಏನನ್ನೂ ಹೇಳಿರುವುದಿಲ್ಲ. ಪಿರ್ಯಾದುದಾರನು ಆರೋಪಿತನಿಗೆ ಏಪ್ರಿಲ್-2017 ರಲ್ಲಿ 6 ಲಕ್ಷ ರೂಪಾಯಿ ಕೊಟ್ಟಿರುತ್ತಾನೆ. ಆ ಸಮಯದಲ್ಲಿ ನಾನು ಮತ್ತು ಪಿಡಬ್ಲೂ-3 ಹಾಜರಿದ್ದೆವು. ಸದರಿ 6 ಲಕ್ಷ ರೂಪಾಯಿ ನಗದು ರೂಪದಲ್ಲಿ, ರೂ.500/- ಮತ್ತು ರೂ.100/- ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತಾರೆ. ಸದರಿ ಹಣವನ್ನು ಪಿರ್ಯಾದುದಾರನು ಆರೋಪಿತನಿಗೆ ಎನಿಸಿ ಕೊಟ್ಟಿರುತ್ತಾನೆ. ನಾನು ಎನಿಸಿರುವುದಿಲ್ಲ. ಸದರಿ ಹಣವನ್ನು ಒಂದು ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಆರೋಪಿ ಹೇಳಿದ್ದನು. ಆರೋಪಿತನಿಗೆ ಸಾಲ ಪಡೆಯಲು ಯಾವ ಅಡಚಣೆ ಇತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿತನಿಗೆ 6 ಲಕ್ಷ ರೂಪಾಯಿ ಕೊಟ್ಟಾಗ ಭದ್ರತೆಗಾಗಿ ಏನನ್ನೂ ಪಡೆದಿರುವುದಿಲ್ಲ. ಬಾಂಡ್ ಪತ್ರ ಬರೆಸಿಲ್ಲ ಹಾಗೂ ಯಾವುದೇ ಚೆಕ್ ನ್ನು ಪಡೆದಿಲ್ಲ.

ಆ ಮೊದಲು ಆರೋಪಿ ಮತ್ತು ಪಿರ್ಯಾದುದಾರನ ಮಧ್ಯೆ ಇರುವ ಹಣಕಾಸಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಆದರೆ ಅವರ ಮಧ್ಯೆ ಮೊದಲು ಹಣದ ವ್ಯವಹಾರ ಇರುವ ಬಗ್ಗೆ ನನಗೆ ಪಿರ್ಯಾದುದಾರ ಹೇಳಿದ್ದ. ಏಪ್ರಿಲ್-2017 ರಲ್ಲಿ ಪಿರ್ಯಾದುದಾರ ನನ್ನ ಸಮಕ್ಷಮ ಆರೊಪಿತನಿಗೆ 6 ಲಕ್ಷ ರೂಪಾಯಿ ಸಾಲದ ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರನ ಹೇಳಿಕೆಯ ಮೇರೆಗೆ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ

ಸಿ.ಸಿ. ನಂ.253/2021
ಪಿಡಬ್ಲ್ಯೂ-3

ದಿನಾಂಕಃ 07-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ವಿಟಿಎಸ್ ವಕೀಲರಿಂದ:**

ನಾನು ಮತ್ತು ಪಿರ್ಯಾದುದಾರ ಒಂದೇ ಗ್ರಾಮದವರಾಗಿರುವುದರಿಂದ ಮೊದಲಿನಿಂದಲೂ ಪರಿಚಯ. ನಾನು ಅವರ ಸಂಬಂಧಿಕನಲ್ಲ. ಪಿರ್ಯಾದುದಾರನು ಆರೋಪಿತನಿಗೆ 6 ಲಕ್ಷ ರೂಪಾಯಿ ಸಾಲವನ್ನು ಯಾವ ದಿನ, ತಿಂಗಳು ಮತ್ತು ವರ್ಷ ಕೊಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ, ಆದರೆ ಸುಮಾರು 7-8 ವರ್ಷಗಳ ಹಿಂದೆ ಕೊಟ್ಟಿರುತ್ತಾನೆ. ನಾನು ಆರೋಪಿತನಿಗೆ 6 ಲಕ್ಷ ರೂಪಾಯಿ ಕೊಡುವಾಗ ಹಾಜರಿದ್ದೆನು. ಸದರಿ ಹಣವನ್ನು ನಗದು ಮೂಲಕ ಕೊಟ್ಟಿರುತ್ತಾನೆ. ಸದರಿ ಹಣವನ್ನು ರೂ.500/- ಮತ್ತು ರೂ.100/- ಮುಖಬೆಲೆಯ ನೋಟುಗಳ ಮೂಲಕ ಕೊಟ್ಟಿರುತ್ತಾರೆ. ಆ ಬಗ್ಗೆ ಯಾವುದೇ ಕಾಗದ ಪತ್ರ ಬರೆದಿರುವುದಿಲ್ಲ. 2017-ಏಪ್ರಿಲ್ ನಲ್ಲಿ ಆರೋಪಿತನಿಗೆ 6 ಲಕ್ಷ ರೂಪಾಯಿ ಸಾಲದ ರೂಪದಲ್ಲಿ ಕೊಟ್ಟಿರುವುದು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ನಿಜ ಇರುತ್ತದೆ. ಆರೋಪಿತನು ಒಂದು ತಿಂಗಳ ಒಳಗಾಗಿ ಸದರಿ ಹಣವನ್ನು ಮರುಪಾವತಿ ಮಾಡುವುದಾಗಿ ಹೇಳಿದ್ದನು. ಸದರಿ ವ್ಯವಹಾರ ಹೊರತುಪಡಿಸಿ ಆರೋಪಿ ಮತ್ತು ಪಿರ್ಯಾದುದಾರನ ಮಧ್ಯೆ ಇರುವ ಹಣದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮತ್ತು ಪಿರ್ಯಾದುದಾರ ಒಂದೇ ಗ್ರಾಮದವರಾಗಿರುವುದರಿಂದ ಅವರ ಹೇಳಿಕೆಯ ಮೇರೆಗೆ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿ ಮತ್ತು ಪಿರ್ಯಾದುದಾರನ ಮಧ್ಯೆ ಯಾವುದೇ ಹಣದ ವ್ಯವಹಾರ ಆಗಿಲ್ಲ, ಆದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ